# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: ಕಾ.ಪಾ.ಅ.(ಚಾ.ಪೇ)/ಪಿಆರ್/ 65 /2014-15

ಕಾರ್ಯಪಾಲಕ ಅಭಿಯಂತರರ ಕಛೇರಿ,
ಚಾಮರಾಜಪೇಟೆ ವಿಭಾಗ,
ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಜೆ.ಸಿ. ರಸ್ತೆ,
2ನೇ ಮಹಡಿ, ಬೆಂಗಳೂರು-560 002
ದಿನಾಂಕ: 03/11/14

## ಮುಂದುವರೆದ ಕಾರ್ಯಾದೇಶ

ವಿಷಯ: ಪೌರಕಾರ್ಮಿಕರ ವಾರ್ಡ್ ಸಂಖ್ಯೆ: 137/ಬಿ ರಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಣೆ ಮಾಡಲು ಒಂದು ಆಟೋವನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ:
1. ಆರೋಗ್ಯ ವೈದ್ಯಾಧಿಕಾರಿ (ಜೆ.ಜೆ.ಆರ್.ನಗರ)ರವರ ಕಾಯಾದೇಶ ಸಂಖ್ಯೆ: ಆ.ವೈ(ಜೆ.ಜೆ.ಆರ್.ನಗರ) ಇಸಿ ಪಿಆರ್ : 97/07-08, ದಿನಾಂಕ: 27-08-2007
2. ಅಪರ ಆಯುಕ್ತರು (ಪಶ್ಚಿಮ)ರವರ ದಿನಾಂಕ: 19-07-2012ರ ಆದೇಶ.
3. ಅಧೀಕ್ಷಕ ಅಭಿಯಂತರರು (ಪಶ್ಚಿಮ)ರವರ ಕಾರ್ಯಾದೇಶ ಸಂಖ್ಯೆ: ಅ.ಅ(ಪ)/ಕಾ.ಆ/ಪಿಆರ್/16/12-13, ದಿನಾಂಕ: 25-07-2012
4. ವಿಶೇಷ ಆಯುಕ್ತರು (ಘ.ತ್ಯಾ.ನಿ)ರವರ ಕಛೇರಿ ಆದೇಶ ಸಂಖ್ಯೆ: ವಿ.ಆ(ಘ.ತ್ಯಾ.ನಿ)/ಪಿಆರ್/363/14-15, ದಿನಾಂಕ: 23-09-2014
5. ಜಂಟಿ ಆಯುಕ್ತರು (ಪಶ್ಚಿಮ)ರವರ ಆಂತರಿಕ ಕಛೇರಿ ಟಿಪ್ಪಣಿ ಜಂ.ಆ(ಪ)/ಪಿಆರ್/95/2014-15, ದಿನಾಂಕ: 29-09-2014

*******

ಮಾನ್ಯ ಅಪರ ಆಯುಕ್ತರು (ಪಶ್ಚಿಮ)ರವರ ಉಲ್ಲೇಖ (2)ರ ಆದೇಶದಂತೆ ಪಶ್ಚಿಮ ವಲಯ ವ್ಯಾಪ್ತಿಯ ಜಗಜೀವನರಾಮನಗರ ಉಪ-ವಿಭಾಗದ ಪೌರಕಾರ್ಮಿಕರ ವಾರ್ಡ್ ಸಂಖ್ಯೆ: 137/ಬಿರಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಣೆ ಮಾಡಲು ಒಂದು ಆಟೋವನ್ನು ದಿನಾಂಕ: 01-08-2012ರಿಂದ ಅನ್ವಯವಾಗುವಂತೆ, ಉಲ್ಲೇಖ (3)ರಂತೆ ಶ್ರೀ. ಬಾಬು ಬಿಲ್ ಲೇಟ್. ನರಸಿಂಹ ರವರಿಗೆ ಕಾರ್ಯಾದೇಶ ನೀಡಲಾಗಿತ್ತು.

ವಾರ್ಡ್ ಸಂಖ್ಯೆ: 137/ಬಿ ಪ್ರದೇಶದಲ್ಲಿ ಕೋಳಚೆ ಪ್ರದೇಶಗಳು ಹೆಚ್ಚಾಗಿರುವುದರಿಂದ ಹಾಗೂ ಈ ಪ್ರದೇಶವು ಖಾಯಂ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಪ್ರದೇಶವಾಗಿದ್ದು, ಈ ಪ್ರದೇಶದ ಕಸ ಸಂಗ್ರಹಣೆಗಾಗಿ ಹಾಗೂ ಇಲ್ಲಿನ ಸ್ವಚ್ಛತಾ ಕಾರ್ಯದ ಹಿತದೃಷ್ಠಿಯಿಂದ ಹೆಚ್ಚುವರಿಯಾಗಿ ಒಂದು ಆಟೋವನ್ನು ನಿಯೋಜಿಕೊಳ್ಳುವ ಅವಶ್ಯಕತೆ ಇರುತ್ತದೆ. ವಿಶೇಷ ಆಯುಕ್ತರು (ಘ.ತ್ಯಾ.ನಿ)ರವರ ಉಲ್ಲೇಖ (4)ರ ಕಛೇರಿ ಆದೇಶದಲ್ಲಿ ಹಾಗೂ ಜಂಟಿ ಆಯುಕ್ತರು (ಪಶ್ಚಿಮ)ರವರು ಉಲ್ಲೇಖ (5)ರ ಆಂತರಿಕ ಕಛೇರಿ ಟಿಪ್ಪಣಿಯಲ್ಲಿ ತಿಳಿಸಿರುವಂತೆ ವಾರ್ಡ್ ಸಂಖ್ಯೆ: 137/ಬಿ ಪ್ರದೇಶಕ್ಕೆ Normative Standard ಅನುಸಾರ ಲೆಕ್ಕಾ ಹಾಕಲು ಹೆಚ್ಚುವರಿಯಾಗಿ ಒಂದು ಆಟೋವಿನ ಅವಶ್ಯಕತೆ ಇರುತ್ತದೆ. ಆದುದರಿಂದ ನಿಮಗೆ ಉಲ್ಲೇಖ (3)ರಂತೆ ನೀಡಲಾಗಿರುವ ಕಾರ್ಯಾದೇಶವನ್ನು ದಿನಾಂಕ: 01-03-2014ರಿಂದ ಅನ್ವಯವಾಗುವಂತೆ, ಹೊಸದಾಗಿ ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಮುಂದುವರೆಸಿದ್ದು, ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮುಂದುವರೆದ ಕಾರ್ಯಾದೇಶ ನೀಡಲಾಗಿದೆ.

## ಷರತ್ತುಗಳು ಮತ್ತು ನಿಬಂಧನೆಗಳು

1. ಗುತ್ತಿಗೆದಾರರು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಪಾಲಿಕೆಯ ಪೌರ ಕಾರ್ಮಿಕರು, ಚಾಲಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳತಕ್ಕದ್ದಲ್ಲ.
3. ವಾರ್ಡಿನ ಕಿರಿಯ/ಸಹಾಯಕ ಅಭಿಯಂತರರು/ಪರಿಸರ ಅಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಉಪ-ಪರಿಸರ ಅಧಿಕಾರಿಯವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.

4. ವಾಹನದ ಮುಂದೆ ವಾಹನದ ಸಂಖ್ಯೆ: ವಾರ್ಡ್ ಸಂಖ್ಯೆ ಹಾಗೂ ವಲಯದ ಹೆಸರು ಹಾಗೂ ಬಿ.ಬಿ.ಎಂ.ಪಿ. ಸೇ ಆಟೋ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.
5. ಪ್ರತಿ ನಿತ್ಯ ಈ ವಾರ್ಡಿನಲ್ಲಿ ಮನೆ–ಮೆನಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಲನ್ನು ಸಂಗ್ರಹಿಸಿ ಸಾಗಿಸತಕ್ಕದ್ದು.
6. ಆಟೋಗಳು ಗೈರು ಹಾಜದಲ್ಲಿ ದೈನಂದಿನ ಸಂಭಾವನೆಗೆ ಅನುಗುಣವಾಗಿ ಎಷ್ಟು ಕಾರ್ಮಿಕರು ಗೈರುಹಾಜರಿ ಆಗುವರೋ ಅಷ್ಟು ದಿನಗಳ ಮೊತ್ತದ ಒಂದೂವರೆಯಷ್ಟು ಮೊತ್ತವನ್ನು ಸದರಿ ಮಾಹೆಯ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
7. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.
8. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರು ಬಾರದಂತೆ ನೋಡಿಕೊಳ್ಳತಕ್ಕದ್ದು.
9. ಕೆಲಸದ ಅವಧಿ ಮತ್ತು ಕೆಲಸ ನಿರ್ವಹಿಸುವ ಪೂರ್ವ ಜವಾಬ್ದಾರಿಯು ಗುತ್ತಿಗೆದಾರರದ್ದೇ ಆಗಿರುತ್ತದೆ.
10. ಕೆಲಸ ನಿರ್ವಹಿಸುವ ಪ್ರದೇಶದ ವಿವರಗಳನ್ನು ಸಂಬಂಧಪಟ್ಟ ಪರಸರ ಅಧಿಕಾರಿಗಳು ರವರಿಂದ ಪಡೆಯುವುದು ಮತ್ತು ಕೆಲಸವನ್ನು ಅವರ ನಿರ್ದೇಶನದಂತೆ ಹಾಗೂ ಮೇಲಾಧಿಕಾರಿಗಳ ಆದೇಶದಂತೆ ನಿರ್ವಹಿಸುವುದು.
11. ಸಮರ್ಪಕವಾಗಿ ಕೆಲಸ ನಿರ್ವಹಿಸದೇ ಇದ್ದಲ್ಲಿ ಯಾವ ಮುನ್ಸೂಚನೆಯಿಲ್ಲದೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.
12. ಕನಿಷ್ಠ ಕಾಯ್ದೆಯಂತೆ ಚಾಲಕರಿಗೆ ಮತ್ತು ಸಹಾಯಕರಿಗೆ ಮಾಸಿಕ ಮೊತ್ತವನ್ನು ಪಾವತಿಸಬೇಕಾಗಿದ್ದು, ಸದರಿ ಮೊತ್ತದಲ್ಲಿ ಗುತ್ತಿಗೆದಾರರ ವಂತಿಕೆ ಶೇ. 4.75 ESI ಮತ್ತು ಶೇ. 13.61 EPF ಒಟ್ಟು ಮೊತ್ತವನ್ನು ಹಾಗೂ ಚಾಲಕರ/ಸಹಾಯಕರ ವಂತಿಕೆ ಶೇ. 1.75 ESI ಮತ್ತು ಶೇ. 12 EPF ಒಟ್ಟು ಮೊತ್ತವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸುವುದು ಹಾಗೂ ಪೌರಕಾರ್ಮಿಕರ ಖಾತೆಗೆ ಪಾವತಿಸಬೇಕಾಗಿರುವ ಮೊತ್ತವನ್ನು ಚೆಕ್ ಮುಖಾಂತರ ಪಾವತಿಸುವುದು.
13. ಗುತ್ತಿಗೆದಾರರಿಗೆ ಪಾಲಿಕೆ ವತಿಯಿಂದ ನೀಡುವ ಒಂದು ತಿಂಗಳಿನ ಬಿಲ್ಲಿನ ಮೊತ್ತದಲ್ಲೇ ಚಾಲಕರ ಮತ್ತು ಸಹಾಯಕರ ಕನಿಷ್ಠವೇತನ +ESI + EPF + ಸರ್ವಿಸ್ ಚಾರ್ಜ್ ಗಳು ಒಳಗೊಂಡಿರುತ್ತದೆ.
14. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ನೌಕರರಿಗೆ ಕನಿಷ್ಠ ವೇತನ ಕಾಯ್ದೆಯಂತೆ ಚೆಕ್ ಮುಖಾಂತರ ವೇತನ ಪಾವತಿಸುವುದು ಹಾಗೂ ನೌಕರರ ESI + EPF ಇತ್ಯಾದಿಗಳನ್ನು ತಮ್ಮ ಹಣದಲ್ಲೇ ಸಂಬಂಧಪಟ್ಟ ಇಲಾಖೆಗೆ ಪಾವತಿಸುವುದು. ಈ ರೀತಿ ಪಾವತಿಸಿದ ಬಿಲ್ಲುಗಳನ್ನು ಮತ್ತು ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿ ಒಟ್ಟು ಮೊತ್ತವನ್ನು ಬಿ.ಬಿ.ಎಂ.ಪಿ. ವತಿಯಿಂದ ಮರುಪಾವತಿ ಪಡೆಯುವುದು.
15. ನಿಮಗೆ ನೀಡಿರುವ ಮುಂದುವರೆದ ಕಾರ್ಯಾದೇಶವು ತಾತ್ಕಾಲಿಕ ಅವಧಿಗೆ ಮಾತ್ರ ಸೀಮಿತವಾಗಿದ್ದು, ಇದನ್ನು ವಿಸ್ತರಿಸುವ ಅಥವಾ ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸುವ ಅಧಿಕಾರವನ್ನು ಈ ಕಛೇರಿಯು ಕಾಯ್ದಿರಿಸಿದೆ.

ಕಾರ್ಯಪಾಲಕ ಅಭಿಯಂತರರು
ಚಾಮರಾಜಪೇಟೆ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ರವರಿಗೆ:

ಶ್ರೀ. ಬಾಬು
ಬಿನ್ ಲೇಟ್. ನರಸಿಂಹ
#142, 10ನೇ ಅಡ್ಡರಸ್ತೆ,
ವಿ.ಎಸ್. ಗಾರ್ಡನ್, ಜೆ.ಜೆ.ಆರ್.ನಗರ
ಬೆಂಗಳೂರು–560 026

ಪ್ರತಿಯನ್ನು:

- ಮಾನ್ಯ ಆಯುಕ್ತರ ಆಪ್ತಕಾರ್ಯದರ್ಶಿಗಳಿಗೆ ಸದರಿ ವಿಷಯವನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಲಾಗಿದೆ.
- ಜಂಟಿ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು (ಪಶ್ಚಿಮ) ರವರ ಮಾಹಿತಿಗಾಗಿ ರವಾನಿಸಿದೆ.
- ಉಪ–ಪರಿಸರ ಅಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಗಜೀವನರಾಮನಗರ ಉಪ–ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
- ಕಛೇರಿ ಕಡತಕ್ಕೆ.